ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/106/2015-16 ದಿನಾಂಕ:05-04-2016

76

| ಅರ್ಜಿದಾರರು | ತಕರಾರುದಾರರು |
|---|---|
| 1)ಹೆಚ್.ಕೆ.ಕಲ್ಲಪ್ಪ ತಂದೆ ರೇವಣ್ಣ<br>2)ತಿಪ್ಪೇಸ್ವಾಮಿ ತಾಯಿ ಲೇಟ್ ಗುರುಸಿದ್ದಮ್ಮ<br>3)ರೇವಣ್ಣ ತಾಯಿ ಲೇಟ್ ತಿಪ್ಪಮ್ಮ<br>4)ಕಲ್ಲಪ್ಪ ತಂದೆ ಲೇಟ್ ಪತ್ರೆಪ್ಪ<br>5)ತಿಪ್ಪಮ್ಮ ಗಂಡ ಲೇಟ್ ಮೂಗಪ್ಪ<br>6)ಬಸಮ್ಮ ಗಂಡ ಲೇಟ್ ಮೂಗಪ್ಪ<br>ನಿಂಬಳಗೇರಿ ಗ್ರಾಮ<br>ಕೂಡ್ಲಿಗಿ ತಾಲೂಕು | ಎಂ.ಜಿ.ರಾಜುಕುಮಾರ ತಂದೆ ಲೇಟ್<br>ಎಂ.ಜಿ.ಮೂಗನಗೌಡ<br>ನಿಂಬಳಗೇರಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 261/2ಪೈಕಿ. ವಿಸ್ತೀರ್ಣ 0-26. ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 261/2ಪೈಕಿ. ವಿಸ್ತೀರ್ಣ 0-26. ಸೆಂಟ್ಸು ಜಮೀನನ್ನು ಸದರಿ ಗ್ರಾಮದ ತಿಪ್ಪೇಸ್ವಾಮಿ ತಾಯಿ ಲೇಟ್ ಗುರುಸಿದ್ದಮ್ಮ. ರೇವಣ್ಣ ತಾಯಿ ಲೇಟ್ ತಿಪ್ಪಮ್ಮ. ಕಲ್ಲಪ್ಪ ತಂದೆ ಲೇಟ್ ಪತ್ರೆಪ್ಪ. ತಿಪ್ಪಮ್ಮ ಗಂಡ ಲೇಟ್ ಮೂಗಪ್ಪ. ಬಸಮ್ಮ ಗಂಡ ಲೇಟ್ ಮೂಗಪ್ಪ. ಇವರಿಂದ ಸದರಿ ಗ್ರಾಮದ ಹೆಚ್.ಕೆ.ಕಲ್ಲಪ್ಪ ತಂದೆ ರೇವಣ್ಣ ಇವರು ದಿನಾಂಕ 18-09-2015 ರ ಡಾಕ್ಯುಮೆಂಟ್ ನಂಬರ್:1956/2015-16 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ನಿಂಬಳಗೇರಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 19-09-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಎಂ.ಜಿ.ರಾಜುಕುಮಾರ ತಂದೆ ಲೇಟ್ ಮೂಗನಗೌಡ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್ ನಂ:07/2015-16. ದಿನಾಂಕ:20-10-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 05-04-2016 ರಂದು ವಿಚಾರಣೆ ಮಾಡಲಾಯಿತು

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ನಿಂಬಳಗೇರಿ ಗ್ರಾಮದ ಸನಂ 261/2ಪೈಕಿ. ವಿಸ್ತೀರ್ಣ 0-26. ಸೆಂಟ್ಸು ಜಮೀನನ್ನು ಸದರಿ ಗ್ರಾಮದ ತಿಪ್ಪೇಸ್ವಾಮಿ ತಾಯಿ ಲೇಟ್ ಗುರುಸಿದ್ದಮ್ಮ. ರೇವಣ್ಣ ತಾಯಿ ಲೇಟ್ ತಿಪ್ಪಮ್ಮ. ಕಲ್ಲಪ್ಪ ತಂದೆ ಲೇಟ್ ಪತ್ರೆಪ್ಪ. ತಿಪ್ಪಮ್ಮ ಗಂಡ ಲೇಟ್ ಮೂಗಪ್ಪ. ಬಸಮ್ಮ ಗಂಡ ಲೇಟ್ ಮೂಗಪ್ಪ. ಇವರಿಂದ ದಿನಾಂಕ 18-09-2015 ರ ಡಾಕ್ಯುಮೆಂಟ್ ನಂಬರ್:1956/2015-16 ರ ಪ್ರಕಾರ ರೂ: 35.000/- ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಬಗ್ಗೆ ಉಭಯರು ರಾಜಿಯಾಗಿ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ಯಾವ ಆಕ್ಷೇಪಣೆಗಳು ಇಲ್ಲವೆಂದು ತಿಳಿಸಿರುತ್ತಾರೆ. ಹಾಗೂ ತಮ್ಮ ತಕರಾರು ಅರ್ಜಿಯನ್ನು ವಾಪಸ್ಸು ಪಡೆದಿರುವುದಾಗಿಯು ಸಹಾ ಹೇಳಿಕೆ ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ. 74

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 261/2ಪೈಕಿ. ವಿಸ್ತೀರ್ಣ 0-26. ಸೆಂಟ್ಸು ಜಮೀನನ್ನು ದಿನಾಂಕ 18-09-2015 ರ ಡಾಕ್ಯುಮೆಂಟ್ ನಂಬರ್: 1956/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಹೆಚ್.ಕೆ.ಕಲ್ಲಪ್ಪ ತಂದೆ ರೇವಣ್ಣ ನಿಂಬಳಗೇರಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 05-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ, ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹೆಚ್. ಕೆ.ಕಲ್ಲಪ್ಪ ತಂದೆ ರೇವಣ್ಣ. ತಿಪ್ಪೇಸ್ವಾಮಿ ತಾಯಿ ಲೇಟ್ ಗುರುಸಿದ್ದಮ್ಮ. ರೇವಣ್ಣ ತಾಯಿ ಲೇಟ್ ತಿಪ್ಪಮ್ಮ. ಕಲ್ಲಪ್ಪ ತಂದೆ ಲೇಟ್ ಪತ್ರೆಪ್ಪ. ತಿಪ್ಪಮ್ಮ ಗಂಡ ಲೇಟ್ ಮೂಗಪ್ಪ. ಬಸಮ್ಮ ಗಂಡ ಲೇಟ್ ಮೂಗಪ್ಪ. ನಿಂಬಳಗೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎಂ.ಜಿ.ರಾಜುಕುಮಾರ ತಂದೆ ಲೇಟ್ ಮೂಗನಗೌಡ ನಿಂಬಳಗೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.